**ಸಾಕ್ಷಿಗೆ ದಿನಾಂಕಃ 24.11.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಆರೋಪಿ ಪರ ಶ್ರೀ. KSS ವಕೀಲರಿಂದಃಃ**

ಬಾಳೆಹೊನ್ನೂರಿನಿಂದ ಅಡಿಗೆಬೈಲು ಎಷ್ಟು ದೂರದಲ್ಲಿದೆ ಎಂದು ನನಗೆ ಗೊತ್ತಿಲ್ಲ. ಹಿರೇಗದ್ದೆ ಗ್ರಾಮ ಬಾಳೆಹೊನ್ನೂರಿನಿಂದ ಎಷ್ಟು ದೂರದಲ್ಲಿದೆ ಎಂದು ನನಗೆ ಗೊತ್ತಿಲ್ಲ. ವೈಕುಂಠಪುರ ಗ್ರಾಮ ಬಾಳೆಹೊನ್ನೂರಿನಿಂದ ಸುಮಾರು 30 ಕಿ ಮೀ ದೂರದಲ್ಲಿದೆ. ಬಾಳೆಹೊನ್ನೂರಿನಿಂದ ಕೊಪ್ಪ ಹಾಗೂ ಶೃಂಗೇರಿ 28 ಕಿ ಮೀ ದೂರದಲ್ಲಿರುತ್ತವೆ.

ನಾನು ಚಿಕ್ಕಮಗಳೂರಿನಿಂದ ಕೆ ಎಸ್ ಆರ್ ಟಿ ಸಿ ಬಸ್ಸಿನಲ್ಲಿ ಸುಮಾರು ಸಂಜೆ 4.30 ಗಂಟೆಗೆ ಹೊರಟು ಕಡಬಗೆರೆ ಹತ್ತಿರ ಬರುವಾಗ ನನಗೆ ಚಾಸಾ-5 ರವರು ಮೊಬೈಲ್ ಕರೆ ಮಾಡಿದರು. ಚಿಕ್ಕಮಗಳೂರಿನಿಂದ ಬಾಳೆಹೊನ್ನೂರು ಸುಮಾರು 50-60 ಕಿ ಮೀ ದೂರದಲ್ಲಿದೆ ಎಂದರೆ ಸರಿ. ನಾನು ಮತ್ತು ಚಾಸಾ-4 ರವರು ಚಿಕ್ಕಮಗಳೂರಿನಿಂದ ಶೃಂಗೇರಿಗೆ ಕೆ ಎಸ್ ಆರ್ ಟಿ ಸಿ ಬಸ್ಸು ಟಿಕೆಟ್ ಪಡೆದುಕೊಂಡಿದ್ದೆವು. ಸದರಿ ಟಿಕೆಟ್ ಗಳನ್ನು ನಾವು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿರುವುದಿಲ್ಲ.

ಬಾಳೆಹೊನ್ನೂರು ಚೌಕದ ಎದುರುಗಡೆ ಬಾಳೆಹೊನ್ನೂರು ಪೊಲೀಸ್ ಠಾಣೆ ಇದೆ ಎಂದರೆ ಸರಿ. ಸದರಿ ಜಾಗಗಳಲ್ಲಿ ಸಿಸಿಟಿವಿ ಅಳವಡಿಸಿರುತ್ತಾರೆಂದರೆ ಸರಿ. ಸೌಂದರ್ಯ ಹೋಟೆಲ್ ಬಳಿ ಸಹ ಸಿಸಿಟಿವಿ ಅಳವಡಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಬಾಳೆಹೊನ್ನೂರು ಬಸ್ ಸ್ಟಾಂಡ್ ನಲ್ಲಿ ಬಸ್ ಇಳಿದ ನಂತರ ನಾವು ಸುಮಾರು ಮುಕ್ಕಾಲು ಗಂಟೆ ಅಲ್ಲಿದ್ದೆವು. ನಾವು ಸದರಿ ವಿಚಾರವನ್ನು ದೂರಿನಲ್ಲಾಗಲೀ ಪೊಲೀಸರ ಮುಂದೆ ನೀಡಿರುವ ಹೇಳಿಕೆಯಲ್ಲಾಗಲೀ ಹೇಳಿರುವುದಿಲ್ಲ. ಸೌಂದರ್ಯ ಹೋಟೆಲ್ ನಲ್ಲಿ ಬಾರ್ ವ್ಯವಸ್ಥೆ ಇರುವುದಿಲ್ಲ. ಸದರಿ ಜಾಗದಲ್ಲಿ ಮದ್ಯಪಾನ ಮಾಡಲು ಅವಕಾಶ ಇರುವುದಿಲ್ಲ. ಸದರಿ ಹೋಟೆಲ್ ನ ಸಿಬ್ಬಂದಿ ಆ ಜಾಗದಲ್ಲಿ ಮದ್ಯಪಾನ ಮಾಡಿದರೆ ಪೊಲೀಸರಿಗೆ ತಿಳಿಸುತ್ತಾರೆಂದರೆ ಸಾಕ್ಷಿಯು ಹೋಟೆಲ್ ಒಳಗೆ ಮದ್ಯಪಾನ ಮಾಡಿದರೆ ತಿಳಿಸಬಹುದು ಹೊರಗಡೆ ಮದ್ಯಪಾನ ಮಾಡಿದರೆ ಹೋಟೆಲ್ ಸಿಬ್ಬಂದಿ ಏನು ಮಾಡುತ್ತಾರೆಂದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಬಸ್ ಸ್ಟಾಂಡ್ ಮುಂಭಾಗ ಸಾಕಷ್ಟು ಜನ ಓಡಾಡುತ್ತಾರೆಂದರೆ ಸರಿ. ಗಲಾಟೆಯಾದ ಸಮಯದಲ್ಲಿ ಅಲ್ಲಿ ಎಷ್ಟು ಜನ ಹಾಗೂ ಯಾರು ಇದ್ದರು ಎಂದು ಹೇಳಲು ಆಗುವುದಿಲ್ಲ. ಎಂಓ-1 ಯಾವ ಕಂಪನಿಯ ಬಿಯರ್ ಬಾಟಲಿಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಚಾಸಾ-5 ರವರು ಟಿ ಟಿ ಗಾಡಿಯಲ್ಲಿ ಘಟನಾ ಸ್ಥಳಕ್ಕೆ ಬಂದಿದ್ದರು. ಆರೋಪಿತರು ಸುಮಾರು 40 ಜನರ ಬಗ್ಗೆ ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಅರ್ಜಿ ಸಲ್ಲಿಸಿ ಅವರಿಗೆ ಸಂಬಂಧಿಸಿದ ಕೆಲವು

ದಾಖಲೆಗಳನ್ನು ಪಡೆದುಕೊಂಡಿರುತ್ತಾರೆ. ಆ 40 ಜನರ ಪೈಕಿ ಯಾರೂ ಸಹ ನನ್ನ ಬಳಿ ಸದರಿ ಆರೋಪಿತರು ತಮಗೆ ಸಂಬಂಧಿಸಿದ ದಾಖಲೆಗಳನ್ನು ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಅರ್ಜಿ ಸಲ್ಲಿಸಿರುವ ಬಗ್ಗೆ ತಿಳಿಸಿರುವುದಿಲ್ಲ. ಘಟನಾ ಸ್ಥಳದಿಂದ ನನ್ನನ್ನು ಆಸ್ಪತ್ರೆಗೆ ಪೊಲೀಸರು ಕರೆದುಕೊಂಡು ಹೋದರು. ಘಟನಾ ಸ್ಥಳಕ್ಕೆ ಪೊಲೀಸರು ಘಟನೆ ನಡೆದ 5 ನಿಮಿಷದ ನಂತರ ಬಂದರು. ಆ ಸಂದರ್ಭದಲ್ಲಿ ಆರೋಪಿತರು ಆ ಜಾಗದಲ್ಲಿ ಇದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾನು ಘಟನಾ ಸ್ಥಳದಲ್ಲಿ ಪೊಲೀಸರು ಬಂದಾಗ ಆರೋಪಿತರು ನನಗೆ ಹೊಡೆದ ವಿಚಾರವನ್ನು ಅಲ್ಲಿಯೇ ಹೇಳಿರುವುದಿಲ್ಲ. ನನ್ನ ಜೊತೆ ಇದ್ದವರು ಚಾಸಾ-4 ಮತ್ತು 5 ರವರುಗಳು ಪೊಲೀಸರಿಗೆ ನನ್ನನ್ನು ಯಾರು ಹೊಡೆದರು ಎಂಬ ವಿಚಾರವನ್ನು ತಿಳಿಸಿದರೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ಆಸ್ಪತ್ರೆಯಲ್ಲಿ ನನಗೆ ಯಾವ ವೈದ್ಯರು ಚಿಕಿತ್ಸೆ ನೀಡಿದರು ಎಂದು ನನಗೆ ಗೊತ್ತಿಲ್ಲ. ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಪೊಲೀಸರು ನನ್ನ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಿಲ್ಲ. ಚಾಸಾ-4 ಮತ್ತು 5 ರವರು ನನ್ನ ಜೊತೆ ಆಸ್ಪತ್ರೆಯ ಪಕ್ಕದ ವಾರ್ಡಿನಲ್ಲಿ ಇದ್ದರು. ನನ್ನ ಹೇಳಿಕೆಯನ್ನು ಪಿ ಎಸ್ ಐ ರವರು ಇಬ್ಬರು ಪಿ ಸಿ ಗಳ ಸಮಕ್ಷಮ ದಾಖಲು ಮಾಡಿಕೊಂಡಿರುತ್ತಾರೆ. ನಿಪಿ-1 ದೂರಿಗೆ ನಾನು ಸಹಿ ಮಾಡಿರುತ್ತೇನೆ. ಬೇರೆ ಯಾರು ನಿಪಿ-1 ರಲ್ಲಿ ಸಹಿ ಮಾಡಿರುತ್ತಾರೆಂದು ನಾನು ಹೇಳಲು ಆಗುವುದಿಲ್ಲ. ಸದರಿ ನಿಪಿ-1 ನ್ನು ಸುಮಾರು ರಾತ್ರಿ 10.30 ಗಂಟೆಯಲ್ಲಿ ಆಸ್ಪತ್ರೆಯಲ್ಲಿ ಪೊಲೀಸರು ಬರೆದುಕೊಂಡರು.

ಆರೋಪಿತರು ಚಾಸಾ-6 ಹಾಗೂ ನನ್ನ ಸಂಬಂಧಿಕರಾದ ನಟರಾಜ್ ರವರುಗಳ ವಿರುದ್ಧ ಲೋಕಾಯುಕ್ತದಲ್ಲಿ ಸದರಿಯವರು ಅಕ್ರಮವಾಗಿ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಕಟ್ಟಡಗಳನ್ನು ಕಟ್ಟಿರುತ್ತಾರೆಂದು ದೂರು ದಾಖಲು ಮಾಡಿರುತ್ತಾರೆಂದರೆ ಸರಿ. ಸದರಿ ನಟರಾಜ್ ರವರು ಶೃಂಗೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಎಂದರೆ ಇರಬಹುದು. ನಟರಾಜ್ ರವರು ಶೃಂಗೇರಿಯಲ್ಲಿ ಬಾರ್, ಪೆಟ್ರೋಲ್ ಬಂಕ್ ಮತ್ತು ರೆಸ್ಟೋರೆಂಟ್ ಗಳನ್ನು ಹೊಂದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ನಟರಾಜ್ ರವರು ಸರ್ಕಾರಿ ಜಮೀನಿನಲ್ಲಿ ಭೂಮಿ ಒತ್ತುವರಿ ಮಾಡಿ ಕಟ್ಟಡಗಳನ್ನು ಕಾನೂನು ಬಾಹಿರವಾಗಿ ನಿರ್ಮಾಣ ಮಾಡಿರುತ್ತಾರೆಂದು ಲೋಕಾಯುಕ್ತದಲ್ಲಿ ದೂರು ದಾಖಲು ಮಾಡಿರುತ್ತಾರೆಂದರೆ ಸರಿ. ಆರೋಪಿತರು ನನ್ನ ಸಂಬಂಧಿಕರಾದ ನಟರಾಜ್ ರವರ ಮೇಲೆ ದೂರು ನೀಡಿರುವುದರಿಂದ ನಾನು ಈ ಸುಳ್ಳು ದೂರನ್ನು ನೀಡಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ನನಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮೇಲಿನ ವೈಯಕ್ತಿಕ ದ್ವೇಷದಿಂದ ಮತ್ತು ನನ್ನ ಸಂಬಂಧಿಕರಾದ ನಟರಾಜ್ ರವರ ಮೇಲಿನ ದೂರನ್ನು ಹಿಂಪಡೆಯಲು ಒತ್ತಡ ಹೇರಲು ಈ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ.

**ಃಃ ಮರು ವಿಚಾರಣೆ ಇಲ್ಲಃಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಓ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ